ಶ್ರೀ ಕೆ.ಹೆಚ್.ರಂಗನಾಥ್: ಇದು ಲೋಕಲ್ ಹೋರಿ ಅಲ್ಲ. ಇದು ಆಸ್ಟ್ರೇಲಿಯಾದಿಂದ ತಂದಿರತಕ್ಕಂಥಾದ್ದು. ಇದು ಸಣ್ಣಪುಟ್ಟ ಹೋರಿ ಅಲ್ಲ. ಲೋಕಲ್ ಆದರೆ ವಿವರ ಕೊಟ್ಟುಬಿಡಬಹುದು. ಆದರೆ ಇದು ಆಸ್ಟ್ರೇಲಿಯಾದಿಂದ ತಂದಿರುವ ಹೋರಿ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಕೃಷ್ಣಪ್ಪನವರು ಕೂಡ ಭಾರಿ ದೊಡ್ಡ ಸಚಿವರು. ಸಣ್ಣಪುಟ್ಟ ಸಚಿವರಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಇದು ಪರ್ಟಿಕ್ಯುಲರ್ ಆಗಿ ಆದಕ್ಕೆ ಸಂಬಂಧಪಟ್ಟ ಹಾಗೆ ಇದೆ. ಕೆ.ಎಂ.ಎಫ್.ಆಸ್ಟ್ರೇಲಿಯಾದಿಂದ ಯಾವಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹೋರಿಗಳನ್ನು ಎಷ್ಟೆಷ್ಟು ವೆಚ್ಚದಲ್ಲಿ ಖರೀದಿಸಲಾಯಿತು? ಈ ವೈಕಿ ಜೀವಂತ ಹೋರಿಗಳು ಎಷ್ಟು? ಹಾಗೂ ಇವುಗಳಿಂದ ಉತ್ಪಾದಿಸಲ್ಪಟ್ಟ ಪಶು ಸಂತತಿ ಎಷ್ಟು? ಆದರ ಬಗ್ಗೆ ರಿಪೋರ್ಟ್ ಇಟ್ಟುಕೊಂಡಿದ್ದರೆ ತತ್‌ಕ್ಷಣ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು: ಇದು ಪ್ರಶ್ನೋತ್ತರ ವೇಳೆ, ಈಗ ಮುಂದಿನ ಪ್ರಶ್ನೆ.

ಶ್ರೀ ಆರಗ ಜ್ಞಾನೇಂದ್ರ: ನಾವು ಅರಣ್ಯಗಳಲ್ಲಿ ಹುಟ್ಟಿರುವ ಹೋರಿಗಳ ಬಗ್ಗೆ ಕೇಳುತ್ತಿಲ್ಲ. ಕೆ.ಎಂ.ಎಫ್‌ನಲ್ಲಿ ಬ್ರೀಡಿಂಗ್ ಸೆಂಟರ್‌ನಲ್ಲಿ ಹುಟ್ಟಿದ ಹೋರಿಗಳ ಬಗ್ಗೆ ಕೇಳುತ್ತಿದ್ದೇವೆ. ಅಲ್ಲಿ ಎಲ್ಲಾ ಕಂಪ್ಯೂಟರೈಜ್ ಆಗಿದೆ.

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೆ, ಮುಂದಿನ ವಾರ ಡೆಫನೆಟ್ ಆಗಿ ಉತ್ತರ ಕೊಡಿ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಾನು ಕಾಲಾವಕಾಶ ಬೇಕು ಎಂದು ಬರೆದಿದ್ದೇನೆ. ಆದರೆ ಮಾನ್ಯ ಸದಸ್ಯರು ಹೋದ ವಾರ ಕೇಳಿದ ಪ್ರಶ್ನೆಗೆಲ್ಲಾ ಉತ್ತರ ಕೊಟ್ಟಿದ್ದೇನೆ. ಇದಕ್ಕೂ ಕೂಡ ನಾವು ತಯಾರು ಮಾಡಿದ್ದೇವೆ. ಇವತ್ತು ನಾನು ಹೇಳಿದ್ದು ಈ ಪ್ರಶ್ನೆಗೆ ಉತ್ತರ ಕೊಡುತ್ತೇನೆಂದು ಅಲ್ಲ, ನನಗೆ ಅವಕಾಶ ಕೊಟ್ಟರೆ ಉತ್ತರ ಕೊಡುತ್ತೇನೆ ಎಂದು. ನಾನು ನಾಳೆ ಅಥವಾ ನಾಡಿದ್ದು ಇದಕ್ಕೆ ಉತ್ತರ ಕೊಡುತ್ತೇನೆ.

ಭದ್ರಾ ಸಹಕಾರ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ

225 (2403) ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ):- ಮಾನ್ಯಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಇಲ್ಲಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆಯೇ;

ಆ) ಹೌದಾದಲ್ಲಿ, ಇದರ ವಿವರಗಳೇನು;

ಇ) 1991-92 ರಿಂದ 1999-2000ರ ವರೆಗೆ ಈ ಕಾರ್ಖಾನೆಯಲ್ಲಿ ಉಂಟಾಗಿರುವ ಲಾಭ: ನಷ್ಟದ ವಿವರಗಳೇನು; (ಪ್ರತಿ ವರ್ಷದ ವಿವರ ಒದಗಿಸುವುದು).

ಈ) 1999-2000ನೇ ಸಾಲಿನಲ್ಲಿ ಈವರೆಗೆ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು ಮತ್ತು ಅರ ಯಲು ಉಳಿದಿರುವ ಪ್ರಮಾಣವೆಷ್ಟು ?

ಶ್ರೀ ಎ.ಕೃಷ್ಣಪ್ಪ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು.

ಅ) ಹೌದು

ಆ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಈಗಿರುವ 1250 ಟನ್ ಸಾಮರ್ಥ್ಯವನ್ನು 2500 ಟನ್‌ಗಳಿಗೆ ಹೆಚ್ಚಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ದಿನಾಂಕ:3-7-96ರಲ್ಲಿ ಅನುಮತಿ ನೀಡಿದೆ. ಕಾರ್ಖಾನೆಯು ಈ ಪೈಕಿ ಮೊದಲ ಹಂತದ ಯೋಜನೆಯಲ್ಲಿ ದಿನವಹಿ, ನುರಿಸುವ ಸಾಮರ್ಥ್ಯವನ್ನು 1800 ಟನ್‌ಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ. ಮೊದಲ ಹಂತದ ವಿಸ್ತರಣಾ ಯೋಜನೆಯ ಒಟ್ಟು ಯೋಜನಾ ವೆಚ್ಚ ರೂ.250 ಲಕ್ಷಗಳಾಗಿರುತ್ತದೆ. ಈ ಮೊತ್ತವನ್ನು ಕಾರ್ಖಾನೆಯು ಕೆಳಕಂಡ ಮೂಲಗಳಿಂದ ಭರಿಸಲು ಯೋಚಿಸಿದೆ.

1) ಎನ್‌ಸಿಡಿಸಿ (ಶೇ 50ರಷ್ಟು)	- ರೂ.125 ಲಕ್ಷ
2) ಸಕ್ಕರೆ ಅಭಿವೃದ್ಧಿ ನಿಧಿ (ಶೇ.37.5 ರಷ್ಟು)	- ರೂ.95 ಲಕ್ಷ
3) ಆಂತರಿಕ ಮೂಲಗಳಿಂದ (ಶೇ.12.5 ರಷ್ಟು)	- ರೂ.30 ಲಕ್ಷ
ಒಟ್ಟು	- ರೂ.250 ಲಕ್ಷ

ಈ ಮೇಲೆ ಹೇಳಿದ ಪೈಕಿ ಎನ್‌ಸಿಡಿಸಿ ಈಗಾಗಲೇ ತನ್ನ ಪಾಲಿನ ಮೊಬಲಗನ್ನು ಮಂಜೂರ್ಮಾಡಿದೆ. ರೂ.250 ಲಕ್ಷಗಳ ಯೋಜನಾ ವೆಚ್ಚದಲ್ಲಿ ಕಾರ್ಖಾನೆಯು ಈಗಾಗಲೇ ರೂ.205 ಲಕ್ಷಗಳ ಕೆಲಸಗಳನ್ನು ಪೂರೈಸಿದೆ.

ಇ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು 1991-92 ರಿಂದ 1999-2000ರ ವರೆಗೆ ಗಳಿಸಿರುವ ಲಾಭ:ನಷ್ಟದ ವಿವರ (ಲಕ್ಷ ರೂ.ಗಳಲ್ಲಿ)

ವರ್ಷ	ಲಾಭ	ನಷ್ಟ	ಕ್ರೋಢೀಕೃತ ನಷ್ಟ
1991-92	-	229.84	742.44
1992-93	-	30.08	772.52
1993-94	130.11	-	642.41
1994-95	27.65	-	614.76
1995-96	151.42	-	463.34
1996-97	82.64	-	380.70
1997-98	87.96	-	292.74
1998-99	24.29	-	268.45

1999-2000 (ಇನ್ನೂ ಲೆಕ್ಕ ಹಾಕಿರುವುದಿಲ್ಲ)

(ತಾತ್ಕಾಲಿಕ)

ಈ) ಕಾರ್ಖಾನೆಯು 1999-2000ನೇ ಸಾಲಿಗೆ 3.50ಲಕ್ಷ ಟನ್ ಕಬ್ಬನ್ನು ಅರೆಯಲು ಕಾರ್ಯಕ್ರಮ ಹಾಕಿಕೊಂಡಿದೆ. ದಿನಾಂಕ:12-4-2000ದ ವರೆಗೆ 2,70,000 ಟನ್ ಕಬ್ಬನ್ನು ಅರೆದಿದ್ದು, ಇನ್ನೂ ಸುಮಾರು 80,000 ಟನ್ ಕಬ್ಬು ಅರೆಯಲು ಬಾಕಿ ಇದೆ.

ಶ್ರೀ ಎಸ್.ವಿ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಈ ಸಕ್ಕರೆ ಕಾರ್ಖಾನೆಯು ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ 1996ರಲ್ಲೇ ಅನುಮತಿ ತೆಗೆದುಕೊಂಡರು. ಆದರೆ ಇಲ್ಲಿಯವರೆಗೆ 2500 ಟನ್ ಕಬ್ಬನ್ನು ಕ್ರಶ್ ಮಾಡಬೇಕೆಂದಿದ್ದರೂ ಕೂಡ ಇನ್ನೂ 1,800 ಟನ್ ಕಬ್ಬನ್ನು ಮಾತ್ರ ಕ್ರಶ್ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದು ಲಕ್ಷ ಟನ್‌ಗಿಂತ ಜಾಸ್ತಿ ಕಬ್ಬು ಆ ಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಉಳಿದಿದೆ. ಹಾಗಾಗಿ ಕಬ್ಬು ಹಾಗೆ ಉಳಿದಿರುವುದರಿಂದ ರೈತರಿಗೆ ಸಾಕಷ್ಟು ತೊಂದರೆಯಾಗಿದೆ. ಅದರ ಜೊತೆಗೆ ನೀರಿನ ತೊಂದರೆಯಿರುವುದರಿಂದ, ಆ ಕಬ್ಬನ್ನು ಬೇರೆ ಎರಡು ಫ್ಯಾಕ್ಟರಿಗಳು ಏನಿದೆ, ಅವರಿಗೆ ಕೊಡುವ ಬಗ್ಗೆ ಮಾನ್ಯ ಸಕ್ಕರೆ ಮಂತ್ರಿಗಳು ಅಲ್ಲಿರತಕ್ಕಂಥ ಸ್ಥಿತಿಗತಿ ಏನಿದೆ ನೋಡಿ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂನಲ್ಲಿ ಈಗಾಗಲೇ ಎಲ್ಲಾ ಕೆಲಸ ಮುಗಿದಿದೆ. ಎನ್‌ಸಿಡಿಸಿ.ಯಿಂದ ಸುಮಾರು 125 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಸಕ್ಕರೆ ಅಭಿವೃದ್ಧಿ ನಿಧಿಯಿಂದ 95 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಕಾರ್ಖಾನೆಯ ಆಂತರಿಕ ಮೂಲಗಳಿಂದ 30 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಒಟ್ಟು 250 ಲಕ್ಷ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಎಲ್ಲಾ ಕೆಲಸಗಳು ಮುಗಿಯುತ್ತಾ ಬಂದಿದೆ. ಆದಷ್ಟು ಬೇಗ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂ ಇಂಪ್ಲಿಮೆಂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎ.ರವೀಂದ್ರನಾಥ್: ನಾನು, ರೈತರಿಗೆ ಕಬ್ಬು ಉಳಿಯುತ್ತಿರುವಂತಹದ್ದರ ಬಗ್ಗೆ ಹೇಳುತ್ತಿರುವುದು. ರೈತರಿಗೆ ಬಹಳ ತೊಂದರೆಯಾಗಿದೆ. ಈಗ ಮಾನ್ಯ ಮಂತ್ರಿಗಳು 80 ಸಾವಿರ ಟನ್ ಕಬ್ಬು ಉಳಿದಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಟನ್ ಕಬ್ಬು ಉಳಿದಿದೆ. ಈಗಾಗಲೇ ಕಬ್ಬು ಬೆಳೆದು 20 ತಿಂಗಳ ಮೇಲಾಗಿದೆ. ಅದಕ್ಕೆ ಏನು ಪರ್ಯಾಯ ವ್ಯವಸ್ಥೆ ಮಾಡುತ್ತೀರಿ? ರೈತರಿಗೆ ಅನ್ಯಾಯ ಆಗದ ಹಾಗೆ ಏನು ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಕಾರ್ಖಾನೆಗೆ ನಾನೇ ನೇರವಾಗಿ ಭೇಟಿ ಕೊಟ್ಟಿದ್ದೆ. ಆದರೆ ರೈತರ ಕಡೆಯಿಂದ ಕಬ್ಬು ಎಕ್ಸಸ್ ಇದೆ ಎನ್ನುವುದರ ಬಗ್ಗೆ ಏನೂ ದೂರು ಬಂದಿಲ್ಲ. ಇನ್ನು ಜಾಸ್ತಿ ಇದ್ದರೆ ಅದನ್ನು ಮಿಲ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನೋಡಿ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರ ನಾಥ್: ಅವರ ಉತ್ತರದಲ್ಲಿ 80,000 ಟನ್ ಕಬ್ಬು ಬಾಕಿ ಇದ್ದು, ಅಲ್ಲಿ ಇನ್ನು ಎಷ್ಟು ಬರುತ್ತದೆ ಎಂದು ಲೆಕ್ಕ ಇರುವುದಿಲ್ಲ. ಅಲ್ಲಿ ಒಂದು ಲಕ್ಷ ಟನ್‌ಗಿಂತ

ಹೆಚ್ಚು ಕಬ್ಬು ಇದೆ. ಈಗಾಗಲೇ ಕಬ್ಬು ಬೆಳೆದು 20 ತಿಂಗಳು ಮೇಲಾಗಿದೆ. ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ದಯಮಾಡಿ ಅಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ತಿಳಿದು ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ:ವೈ.ನಾಗಪ್ಪ: ಭದ್ರಾ ಸಕ್ಕರೆ ಕಾರ್ಖಾನೆ ಹೊಸದೇನು ಅಲ್ಲ. ಪ್ರತಿ ಸಾರಿಯೂ ರೈತರಿಗೆ ಬಹಳ ತೊಂದರೆಯಾಗುತ್ತಿದೆ. 10-20 ತಿಂಗಳಾದರೂ ಕಬ್ಬಿಗೆ ಪರ್ಮಿಟ್ ಕೊಡುವುದಿಲ್ಲ; ಹಾಗೂ ಒಂದು ವೇಳೆ ಪರ್ಮಿಟ್ ಕೊಡಬೇಕಾದರೂ ಬಹಳ ಸತಾಯಿಸುತ್ತಾರೆ. ಕೆಲವು ಬಾರಿ ಕಬ್ಬು ಒಣಗಿ ಹೋದಮೇಲೆ ಪರ್ಮಿಟ್ ಕೊಡುತ್ತಾರೆ. ಎಷ್ಟೋ ಜನ ರೈತರು ಫ್ಯಾಕ್ಟರಿಗೆ ಕೊಡಬಾರದು ಎಂದು ಹೇಳಿ ಬೆಂಕಿ ಹಾಕಿ ಸುಟ್ಟಿದ್ದಾರೆ. ಆ ದೃಷ್ಟಿಯಿಂದ ಅದನ್ನು ಡೈವರ್ಟ್ ಮಾಡಿ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಯಾವಾಗಲೂ ಕೂಡ ರೈತರು ನೇರವಾಗಿ ಬಂದು ಮಂತ್ರಿಗಳಿಗೆ ದೂರು ಕೊಡುವುದಿಲ್ಲ. ನನ್ನ ಕ್ಷೇತ್ರದಲ್ಲೂ ಕೂಡ ಬಹಳಷ್ಟು ಜನ ಕಬ್ಬು ಬೆಳೆಗಾರರು ಇದ್ದಾರೆ. ಇದರಿಂದ ರೈತರಿಗೆ ಬಹಳಷ್ಟು ನೋವಾಗಿದೆ. ಅದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ರವೀಂದ್ರನಾಥ್ ಅವರು ಹೇಳಿದ ಹಾಗೆ ಆದ್ಯತೆ ಮೇಲೆ ಅದನ್ನು ಡೈವರ್ಟ್ ಮಾಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅವರ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷ ಟನ್‌ನಷ್ಟು ಕಬ್ಬು ಹೆಚ್ಚಿಗೆ ಇದ್ದು ಅದರಲ್ಲಿ ಬಹುಭಾಗ 20 ತಿಂಗಳುಗಳಿಗಿಂತ ಮೇಲಿನ ಅವಧಿಯಾಗಿರತ್ಕಂಥ ಕಬ್ಬು ಇದೆ. 15ರಿಂದ 16 ತಿಂಗಳಿನ ಅವಧಿಯಲ್ಲಿ ಕಬ್ಬನ್ನು ಅರೆದರೆ ಸರಿಸಮಾನವಾದ ಸಕ್ಕರೆ ಇಳುವರಿ ಬರುತ್ತದೆ. 20 ತಿಂಗಳಾದರೆ ರೈತನ ಕತೆ, ನೀರು ಕಟ್ಟಿದ್ದರ ಕೂಲಿ ಕೂಡ ಸಿಗುವುದಿಲ್ಲ. ನನ್ನ ಅಂದಾಜಿನಲ್ಲಿ ಇದೇ ರೀತಿಯಾದಂತಹ ಪರಿಸ್ಥಿತಿ ಇದೆ. ಆದುದರಿಂದ ಈ ಪ್ರಶ್ನೆಯನ್ನು ತಾವು ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ. ರಾಜ್ಯದಲ್ಲಿ ಎಲ್ಲಿ ಏನಾಗಿದೆ? ಈ ವರ್ಷ ಎಷ್ಟು ಕಬ್ಬು ಬೆಳೆ ನಿರೀಕ್ಷೆ ಮಾಡುತ್ತಿದ್ದೀರಿ? ಅರೆಯತಕ್ಕಂಥ ಸಾಮರ್ಥ್ಯ ಎಷ್ಟಿದೆ? ಉಳಿಯತಕ್ಕಂಥ ಕಬ್ಬಿಗೆ ಏನು ವ್ಯವಸ್ಥೆ ಮಾಡುತ್ತೀರಿ ಎನ್ನುವ ವಿಚಾರರನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕೆ ಪರಿಹಾರ ಕೂಡ ಹುಡುಕಬೇಕಾಗುತ್ತದೆ. ಇದು ರೈತರ ಸಮಸ್ಯೆಯಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ.ಕೃಷ್ಣಪ್ಪ: 80,000 ಟನ್ ಕಬ್ಬು ಉಳಿಕೆ ಆಗುತ್ತಿದೆ. ಅದನ್ನು ಮಿಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ನಾಗಪ್ಪ ಹಾಗೂ ಮಾನ್ಯ ರವಿಂದ್ರನಾಥ್‌ರವರಿಗೆ ನಾವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪೂರ್ತಿ ವಿವರ ಮುಟ್ಟಿಲ್ಲವೆಂದು ಕಾಣುತ್ತದೆ. ಜೊತೆಗೆ ಮಾನ್ಯ ಬೈರೇಗೌಡರು, ರಾಜ್ಯದಲ್ಲಿ ಈ ರೀತಿಯಾದಂತಹ ಸಮಸ್ಯೆ ಇದೆ, ಇದರಿಂದ ರೈತರು ಕಂಗಾಲಾಗಿದ್ದಾರೆ, ಆರ್ಥಿಕ ನಷ್ಟವಾಗುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಕರ್ನಾಟಕ ಸರ್ಕಾರ, ನಾವು ಅಧಿಕಾರಕ್ಕೆ ಬಂದ ತಕ್ಷಣ ಮಹಾರಾಷ್ಟ್ರ ಮತ್ತು ಗೋವಾ ಸರ್ಕಾರದ ಜೊತೆ ಮಾತುಕತೆ

ಮಾಡಿ, ಸುಮಾರು 23 ಲಕ್ಷ ಟನ್ ಎಕ್ಸಸ್ ಕಬ್ಬು ಏನು ಐಡೆಂಟಿಫೈ ಮಾಡಿದ್ದೇವೆ, ಅದನ್ನು ಆ ರಾಜ್ಯದ ಬಾರ್ಡರ್‌ಗಳಲ್ಲಿ ಇರುವಂತಹ ಕಾರ್ಖಾನೆಗಳಲ್ಲಿ ಮಿಲ್ ಮಾಡುವುದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಆ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತುಕತೆ ಮಾಡಿದ್ದು ಹಾಗೂ ಇಲ್ಲಿಂದ ನಮ್ಮ ಸಚಿವರನ್ನು ಅಲ್ಲಿಗೆ ಕಳುಹಿಸಿ, ಬೆಳಗಾಂಗೆ ಮಹಾರಾಷ್ಟ್ರ, ಸರ್ಕಾರದ ಡೈರೆಕ್ಟರ್ ಮತ್ತು ಕಮಿಷನರ್‌ರವರನ್ನು ಕರೆಸಿ, ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಇಟ್ಟು ಎಲ್ಲೆಲ್ಲಿ ಕಬ್ಬು ಎಕ್ಸಸ್ ಇದೆ, ಬೀದರ್ ಬೆಳಗಾಂ ಬಾರ್ಡರ್ ಪ್ರದೇಶಗಳಲ್ಲಿ ಇರುವಂತಹ ಕಾರ್ಖಾನೆಗಳಿಗೆ ರವಾನೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅದಕ್ಕೆ ಕರ್ನಾಟಕ ಸರ್ಕಾರದಿಂದ ಆದೇಶ ಕೊಟ್ಟು ಅದು ಎಲ್ಲಾ ಜಿಲ್ಲೆಗಳಿಗೆ ಹೋಗಿದೆ. ಬಾರ್ಡರ್‌ಗಳಲ್ಲಿ ಇರುವುದನ್ನು ಕಳುಹಿಸಿದ್ದೇವೆ. ಈ ಕಾರ್ಖಾನೆ ಬಗ್ಗೆ ನನ್ನ ಗಮನಕ್ಕೆ ಬಂದಿರಲಿಲ್ಲ. ಮಾನ್ಯ ರವೀಂದ್ರ ಹಾಗೂ ಮಾನ್ಯ ನಾಗಪ್ಪನವರು ಇಬ್ಬರು ಹೇಳಿದ್ದಾರೆ, ಅದಕ್ಕೆ ಬೇಕಾದಂತಹ ಕ್ರಮವನ್ನು ಸರ್ಕಾರ ಕೂಡಲೇ ತೆಗೆದುಕೊಳ್ಳುತ್ತದೆ.

11.00 ಎಎಂ

ಶ್ರೀ ಸಿ.ಬೈರೇಗೌಡ: ಇದು ಗಡಿ ಪ್ರದೇಶದಲ್ಲಿರುವಂತಹ ಸಕ್ಕರೆ ಕಾರ್ಖಾನೆ, ಮತ್ತು ಕಬ್ಬು ಬೆಳೆದಂತಹ ಕತೆಯಾಯಿತು. ಈಗ ಮಂಡ್ಯ, ಶಿವಮೊಗ್ಗದಲ್ಲಿ ಕಬ್ಬು ಬೆಳೆಯುತ್ತಿದ್ದಾರೆ, ಅದೇ ರೀತಿಯಲ್ಲಿ ಬೆಂಗಳೂರು ಸುತ್ತಮುತ್ತಲೂ ಕಬ್ಬು ಇದೆ.

ಅಧ್ಯಕ್ಷರು: ತಾವು ವಿಷಯವನ್ನು ಬರೆದು ಕಳುಹಿಸಿ, ನಾವು ಅದನ್ನು ಕನ್ಸಿಡರ್ ಮಾಡುತ್ತೇವೆ.

ಶ್ರೀ ಬೈರೇಗೌಡ: ಅದಕ್ಕೆ ಮೊದಲು ನಮಗೆ ಏನಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡಬೇಕು. ನಾವು ಬರೆದು ಕಳಹಿಸುವುದಕ್ಕಿಂತ ತಾವೇ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಸಾಕು.

Mr.Speaker: Please leave it to me.

ಡಾ: ವೈ.ನಾಗಪ್ಪ: ಮಾನ್ಯ ಹಿರಿಯ ಸದಸ್ಯರು ಸಿ.ಬೈರೇಗೌಡರು ಹೇಳಿದ ಹಾಗೆ ಮಾನ್ಯ ಮಂತ್ರಿಯವರು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. It is absolutely not possible. ಇವತ್ತು ತಾವು ಆರ್ಡರ್ ಮಾಡಿ ಕಳುಹಿಸಿಬಿಟ್ಟರೆ ಆಗುವುದಿಲ್ಲ. It will be in the paper only. ಪ್ರಾಕ್ಟಿಕಲ್ ಎಕ್ಸ್‌ಪೀರಿಯನ್ಸ್ ತಮಗೆ ಗೊತ್ತಿಲ್ಲ. ನಾವು ರೈತರ ಮಕ್ಕಳು, ನಮಗೆ ಅಲ್ಲಿನ ಪರಿಸ್ಥಿತಿ ಏನೆಂಬುದು ಗೊತ್ತಿದೆ. ಎಷ್ಟೊ ಜನರು ಹಿಂದೆ ತೊಗರಿಬೇಳೆ ಬೆಳೆಯಲಿಲ್ಲವೆಂದು ವಿಷವನ್ನು ತೆಗೆದುಕೊಂಡ ರೀತಿಯಲ್ಲಿ ರೈತರು ಹರಿಹರ ತಾಲ್ಲೂಕಿನಲ್ಲೂ ವಿಷ ತೆಗೆದುಕೊಂಡು ಸಾಯುವಂತಹ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ತಾವು ದಯಮಾಡಿ ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಎ.ಕೃಷ್ಣಪ್ಪನವರೆ, ಇದು ಬಹಳ ಮುಖ್ಯವಾದಂತಹ ವಿಚಾರ ಎಂದು ಕಾಣುತ್ತದೆ.

ಶ್ರೀ ಎ.ಕೃಷ್ಣಪ್ಪ: ನಾವು ಏನು ವಿವರವಾಗಿ ಉತ್ತರವನ್ನು ಕೊಡುವುದಕ್ಕೆ ಹಿಂಜರಿಯುತ್ತಿಲ್ಲ, ಅಥವಾ ನಮಗೆ ಉತ್ತರವನ್ನು ಕೊಡುವುದಕ್ಕೆ ಏನು ಕಷ್ಟವಾಗಿಲ್ಲ. ಆದರೆ ಡಾ:ವೈ ನಾಗಪ್ಪನವರು ಹೇಳಿದ ಹಾಗೆ ನಾನು ರೈತನ ಮಗ, ನಮಗೆ ಅವರ ಕಷ್ಟ ಅರ್ಥವಾಗುತ್ತದೆ. ನಿಮಗೆ ಅದು ಅರ್ಥವಾಗುವುದಿಲ್ಲವೆಂಬುದು ಒಪ್ಪುವಂತಹ ಮಾತಲ್ಲ. ನಾನು ಸಹ ರೈತನ ಮಗನೇ. ನಮ್ಮ ಸರ್ಕಾರ ಬಂದ ತಕ್ಷಣ 22 ಸಕ್ಕರೆ ಕಾರ್ಖಾನೆಗಳ ಬಗ್ಗೆ ನಾವು ನೇರವಾಗಿ ಹೋಗಿದ್ದು ಕಾರಣವೇನೆಂದರೆ ಅವರ ಕಷ್ಟಗಳನ್ನು ತಿಳಿದುಕೊಳ್ಳುವುದಕ್ಕೆ, ಅದನ್ನು ತಿಳಿದುಕೊಂಡು ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿದ್ದೇವೆ. ನಮಗೆ ಯಾವುದು ಗಮನಕ್ಕೆ ಬಂದಿಲ್ಲವೋ ಅದಕ್ಕೆ ತಕ್ಷಣವೇ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ನೀವು ಪ್ರಾಕ್ಟಿಕಲ್ ಆಗಿ ಹೇಳಿಕೆಯನ್ನು ಕೊಟ್ಟುಬಿಟ್ಟರೆ ಆಗುತ್ತದೆಯೇ ಎಂದು ಹೇಳಿದಿರಿ. ಆದರೆ ಅಲ್ಲಿ ಪ್ರಾಕ್ಟಿಕಲ್ ಆಗಿ ಡಿಫಿಕಲ್ಟ್ ಇದೆ ಎಂದು ಹೇಳಿದಿರಿ. This problem is existing over a period of years; not to-day *ಇವತ್ತು ಅದಕ್ಕಾಗಿ ಏನು ಎಕ್ಸ್‌ಪ್ಯಾನ್‌ಷನ್ ವರ್ಕ್ ಏಕೆ ತೆಗೆದುಕೊಂಡಿದ್ದೇವೆ, ಮತ್ತೆ ಏತಕ್ಕಾಗಿ ಎರಡು ಕೋಟಿ ಚಿಲ್ಲರೆ ಹಣವನ್ನು ಕೊಟ್ಟಿದ್ದೇವೆಂದರೆ, ಈ ರೈತರಿಗೆ ಅನ್ಯಾಯ, ತೊಂದರೆಗಳು ಆಗಬಾರದೆಂದು, ಇದನ್ನು ಅಂತಿಮ ಮಾಡಬೇಕೆಂದು ಈ ಒಂದು ಕಾರಣದಿಂದ ಇವತ್ತು ಆ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಬೈರೇಗೌಡರು ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಅದಕ್ಕೆ ತಾವು ಒಂದು ದಿನಾಂಕವನ್ನು ನಿಗದಿ ಮಾಡಿ ನನಗೆ ಸ್ವಲ್ಪ ಸಮಯಾವಕಾಶವನ್ನು ಕೊಡಬೇಕು.*

ಅಧ್ಯಕ್ಷರು: ಆಯಿತು, ಆ ವಿಷಯವನ್ನು ನನಗೆ ಬಿಡಿ, ಮುಂದೆ ಒಂದು ದಿನ ಹಾಕಿಕೊಳ್ಳೋಣ, ಏಕೆಂದರೆ ಇದು ಮುಖ್ಯವಾದಂತಹ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಲ್ಲಿ ದೇವಿ ಸಕ್ಕರೆ ಕಾರ್ಖಾನೆಯ ಬಗ್ಗೆ ಕೇಳಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಚಂದ್ರಶೇಖರ್‌ರವರೆ, ಈ ವಿಷಯವನ್ನು ಅರ್ಧ ಗಂಟೆಯ ಚರ್ಚೆಗೆ ತೆಗೆದುಕೊಳ್ಳುತ್ತೇವೆಲ್ಲಾ. . . . . .

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿ ಐದು ವರ್ಷಗಳಾಗಿವೆ. ನಮಗೆ ಹೆಚ್ಚಿನ ಅವಕಾಶವನ್ನು ಕೊಡಬೇಕೆಂದು ಕಳಕಳಿಯಿಂದ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ರೈತರು ಕಬ್ಬನ್ನು ಹೆಚ್ಚಿಗೆ ಬೆಳೆದು ಕಂಗಾಲಾಗಿದ್ದಾರೆ. ಅದನ್ನು ಎಲ್ಲಿಗೆ ತೆಗೆದುಕೊಂಡು ಹೊಗಬೇಕೆಂಬುದೇ ಕಷ್ಟವಾಗಿದೆ. ಇವತ್ತು ದಾವಣಗೆರೆಯಲ್ಲೂ ಕಬ್ಬನ್ನು ತೆಗೆದುಕೊಳ್ಳುತ್ತಿಲ್ಲ, ಭದ್ರಾವತಿಯಲ್ಲೂ ತೆಗೆದುಕೊಳ್ಳುತ್ತಿಲ್ಲ. ಈ ರೀತಿ 20 ತಿಂಗಳಾದರೂ ಅವರಿಗೆ ಯಾರಿಗೂ ಅವಕಾಶವನ್ನು ಕೊಟ್ಟಿಲ್ಲ. ಆದುದರಿಂದ ದಯಮಾಡಿ ಹೆಚ್ಚಿನ ಆದ್ಯತೆಯನ್ನು ಶಿವಮೊಗ್ಗದ ರೈತರಿಗೆ ಕೊಡಬೇಕು.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ ಅದಕ್ಕೆ ಉತ್ತರವನ್ನು ಕೊಡೋಣ. ಆದರೆ ಮಾನ್ಯ ಚಂದ್ರಶೇಖರ್‌ರವರಿಗೆ ಒಂದು ವಿಚಾರವನ್ನು ಜ್ಞಾಪಕ ಮಾಡಲು ಪ್ರಯತ್ನ ಪಡುತ್ತೇನೆ, ಅದೇನೆಂದರೆ, ಆ ಕಾರ್ಖಾನೆಯ ವಿಚಾರವಾಗಿ

ಹಲವಾರು ಬಾರಿ ರೈತರ ಜೊತೆಯಲ್ಲಿ, ನಮ್ಮ ಚುನಾಯಿತ ಸದಸ್ಯರುಗಳ ಜೊತೆಯಲ್ಲಿ, ಆ ಕಾರ್ಖಾನೆಗೆ ಸಂಬಂಧಪಟ್ಟಂಥವರ ಜೊತೆಯಲ್ಲಿ, ನಾಲ್ಕೈದು ಸಭೆಗಳನ್ನು ಮಾಡಿದ್ದೇವೆ. ತಾವು ಏನು ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳುವಂಥಾದ್ದು ಸರಿಯಲ್ಲ. ಆದರೂ ತಾವು ಏನಾದರೂ ಪ್ರಶ್ನೆಯನ್ನು ಕಳುಹಿಸಬೇಕೆಂದು ಇದ್ದರೆ ಕಳುಹಿಸಿ, ಸರ್ಕಾರದ ಮೂಲಕ ಏನು ವಿಚಾರವಿದೆಯೋ ಅದನ್ನು ತಮ್ಮ ಗಮನಕ್ಕೂ ಮತ್ತೆ ಸದನದ ಗಮನಕ್ಕೂ ತರುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮ್ಮ ರಾಜ್ಯದಲ್ಲಿರತಕ್ಕ ಸುಮಾರು 30-31 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವುದಕ್ಕೆ ಸಾಧ್ಯವಾಗದಿರುವಷ್ಟು ಕಬ್ಬನ್ನು ರೈತರು ಬೆಳೆದಿದ್ದಾರೆ. ಇದನ್ನು ಹೊರ ರಾಜ್ಯಕ್ಕೆ ಕಳುಹಿಸುವುದು ಕೂಡ ಸಮಸ್ಯೆಯಾಗುತ್ತಿದೆ, ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂ ತೆಗೆದುಕೊಳ್ಳುತ್ತಿಲ್ಲ. ಹೊಸ ಕಾರ್ಖಾನೆಗಳಿಗೆ ಕೊಡುವಂತಹ ಶೇರು ಅಮೌಂಟ್ ಕೊಡುತ್ತಾ ಇಲ್ಲ. ಈ ರೀತಿಯಾಗಿ ಅನೇಕ ಸಮಸ್ಯೆಗಳು ಇವೆ. ಹೀಗಾಗಿ ರೈತರಿಗೆ ಕೊಡಬೇಕಾದಂತಹ ಬಾಕಿಯನ್ನು ಕೊಡುತ್ತಿಲ್ಲ, ಉದಾಹರಣೆಗೆ ಹೇಳುವುದಾದರೆ, ರಾಯ್‌ಬಾಗ್ ಸಕ್ಕರೆ ಕಾರ್ಖಾನೆಯಲ್ಲಿ 1998ನೇ ಇಸವಿಯದು 26ಕೋಟಿ ರೂಪಾಯಿಗಳು ರೈತರಿಗೆ ಕೊಡಬೇಕಾದಂತಹ ಸಾಲದ ಬಾಕಿ ಇದೆ, 1999ರಲ್ಲಿ 18 ಕೋಟಿ ರೂಪಾಯಿಗಳ ಬಾಕಿ ಇದೆ. ಇಡೀ ರಾಜ್ಯದಲ್ಲಿ ರೈತರಿಗೆ ಸಕ್ಕರೆ ಕಾರ್ಖಾನೆಯಿಂದ 106 ಕೋಟಿ ರೂಪಾಯಿಗಳ ಬಾಕಿ ಕೊಡಬೇಕಾದುದು ಇದೆ. ಆದುದರಿಂದ ಈ ವಿಷಯವನ್ನು ಅರ್ಧ ಗಂಟೆಯ ಕಾಲ ಚರ್ಚೆಗೆ ಮಾಡಲು ಅವಕಾಶ ಮಾಡಿ ಕೊಡಿ, ಈ ಸಕ್ಕರೆ ಕಾರ್ಖಾನೆ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವಂತಹ ಅವಶ್ಯಕತೆ ಇದೆ.

ಅಧ್ಯಕ್ಷರು: ಈ ವಿಷಯವನ್ನು ಮುಂದಿನ ಶುಕ್ರವಾರದೊಳಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎ.ಕೃಷ್ಣಪ್ಪ: ಈ ಕಾರ್ಖಾನೆಯ ಬಗ್ಗೆ ಹಿಂದಿನವಾರ ಸಮಗ್ರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಈ ಕಾರ್ಖಾನೆ ಏಕೆ ಹೆಚ್ಚಿಗೆ ನಷ್ಟವಾಗುತ್ತಿದೆ, ಮತ್ತೆ ಈ ಕಾರ್ಖಾನೆಯ ಸ್ಥಿತಿ ಚಿಂತಾಜನಕವಾಗಿದೆ ಎಂಬ ಬಗ್ಗೆ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲೂ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇನ್ನೂ ಹೆಚ್ಚಿನ ವಿವರಗಳು ಅಂದರೆ ಈ ಕಾರ್ಖಾನೆಯ ಸ್ಥಿತಿಗತಿಗಳು, ಮತ್ತೆ ರೈತರಿಗೆ ಎಷ್ಟು ಕಷ್ಟ ಬಂದಿದೆ, ಇವರು ಕಬ್ಬಿಗೆ ಬೆಂಕಿ ಇಡುವಂಥಾದ್ದು, ಬಟವಾಡೆಯಾಗದಿರುವಂಥಾದ್ದು, ಇವೆಲ್ಲ ವಿವರಗಳನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಇವೆಲ್ಲವನ್ನು ನಾವು ಸ್ಟೇಟ್‌ಮೆಂಟ್ ಮಾಡಿದ್ದೇವೆ. ಇನ್ನು ಈ ಪಾಲಿಸಿ ಮ್ಯಾಟರ್ ವಿಚಾರದಲ್ಲಿ ಕಾರ್ಖಾನೆಯನ್ನು ಬಲವರ್ಧನೆ ಮಾಡುವಂತಹ ವಿಚಾರದಲ್ಲಿ, ರೈತರ ಕಷ್ಟ ತೀರಿಸುವಂತಹ ವಿಚಾರದಲ್ಲಿ, ಕರ್ನಾಟಕ ಸರ್ಕಾರ ಅಗತ್ಯವಾದಂತಹ ಎಲ್ಲಾ ಕ್ರಮವನ್ನು ತೆಗೆದುಕೊಂಡಿದೆ, ಮತ್ತೆ ಮಾನ್ಯ ಪ್ರಧಾನ ಮಂತ್ರಿಯವರೊಡನೆ ಸಹ ಮಾತುಕತೆಯಾಗಿದೆ, ಪತ್ರವನ್ನು ಬರೆದಿದ್ದೇವೆ; ಮತ್ತೆ ಮಹಾಜನ್ ಆಯೋಗ ಕೊಟ್ಟಿರುವಂತಹ ಶಿಫಾರಸ್ಸು ಜಾರಿ ಮಾಡಿ ಎಂದು ಒತ್ತಾಯವನ್ನು ಮಾಡಿದ್ದೇವೆ. ನಾವು ಎಲ್ಲಾ ಕ್ರಮವನ್ನು ಇದರ ಬಗ್ಗೆ ತೆಗೆದುಕೊಂಡಿದ್ದೇವೆ. ಆದರೂ ನೀವು ಅರ್ಧ ಗಂಟೆಯ ಚರ್ಚೆ ಬೇಕೆಂದರೆ ನಾವು ಮಾಹಿತಿಯನ್ನು ಕೊಡುತ್ತೇವೆ. ನೀವು ನಿಮ್ಮ ಸಹಕಾರವನ್ನು ಕೊಡಿ, ಕೇಂದ್ರ ಸರ್ಕಾರಕ್ಕೆ ಯಾವ ರೀತಿಯಲ್ಲಿ ಮನ ಒಲಿಸಬೇಕಾಗಿದೆಯೋ ಅದರ ಬಗ್ಗೆಯೂ ಪ್ರಯತ್ನ ಮಾಡೋಣ.

ಅಧ್ಯಕ್ಷರು: ಮಾನ್ಯ ಕೆ.ಎಸ್.ಸುಬ್ಬಾರೆಡಿಯವರು ಯಾವಾಗಲೂ ಬೇಗ ಬರುತ್ತಿದ್ದರು, ಇವತ್ತು ಏಕೆ ತಡವಾಗಿ ಬಂದಿದ್ದಾರೆ?

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವತ್ತು ಟೈಮ್ ಹಾಕಿರುವಂಥಾದ್ದು ಸರಿಯಾಗಿ ಇಲ್ಲ.

ಅಧ್ಯಕ್ಷರು: ನಾವು ಬಿ.ಎ.ಸಿ.ತೀರ್ಮಾನದಂತೆ ಟೈಮ್ ಹಾಕಿದ್ದೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಪೇಪರ್‌ನಲ್ಲಿ 11.00ಗಂಟೆ ಎಂದು ಬಂದಿದೆ, ತಾವು 10.00ಗಂಟೆ ಎಂದು ಹಾಕಿದ್ದೀರಿ, ಮತ್ತು ತಾವು 10.30ಗಂಟೆಗೆ ಬಂದಿದ್ದೀರಿ.

ಅಧ್ಯಕ್ಷರು: ಇಲ್ಲ, ನಾನು 9.45ಗಂಟೆಗೆ ಬಂದಿದ್ದೇನೆ.

ಟಿ.ನರಸೀಪುರದಲ್ಲಿ ರಸ್ತೆ ನಿರ್ಮಾಣ

217 (2426) ಡಾ: ಭಾರತಿ ಶಂಕರ್ (ಟಿ.ನರಸೀಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ

ಅ) ಟಿ.ನರಸೀಪುರ ಪಟ್ಟಣದಲ್ಲಿ ತಿರುಮಕೂಡಲು ವೃತ್ತದಿಂದ ವಿದ್ಯೋದಯ ಕಾಲೇಜು ವೃತ್ತದವರೆಗೆ ಇರುವ ರಸ್ತೆಯಲ್ಲಿ ಮುಖ್ಯ ಬಸ್ ನಿಲ್ದಾಣವಿದ್ದು, ದಿನಂಪತ್ರಿ 4000 ಕ್ಕೂ ಹೆಚ್ಚು ವಾಹನಗಳ ಸಂಚಾರವಿದ್ದು, ರಸ್ತೆ ತುಂಬ ಹದಗೆಟ್ಟಿ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಮತ್ತು ಈ ಕಾಮಗಾರಿಯನ್ನು ಪೂರ್ಣಗೊಳಿಸಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಧರ್ಮಸಿಂಗ್ ಲೋಕೋಪಯೋಗಿ ಸಚಿವರು.

ಅ) ಹೆಚ್ಚು ವಾಹನಗಳ ಸಂಚಾರವಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಇ) 1999-2000 ದ ದರಪಟ್ಟಿಯಂತೆ ಈ ಕಾಮಗಾರಿಯ ಅಂದಾಜು ಮೊತ್ತ 115.00 ಲಕ್ಷ ರೂ.ಗಳು. ತಿರುಮಕೂಡಲು ವೃತ್ತದಿಂದ ವಿದ್ಯೋದಯ ಕಾಲೇಜು ವೃತ್ತದವರೆಗಿನ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆಯಾಗಿದೆ.

ಡಾ:ಭಾರತಿ ಶಂಕರ್: ಮಾನ್ಯ ಅಧ್ಯಕ್ಷರೆ, ನಾವು ರಸ್ತೆಯ ವಿಚಾರವಾಗಿ ನವೆಂಬರ್ ತಿಂಗಳಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಯವರೆಗೆ ತೋರಿಸಿದ್ದೇವೆ, ಅವರು ಸೇತುವೆಯ ವಿಚಾರವಾಗಿ ಅಲ್ಲಿಗೆ ಜನವರಿ ತಿಂಗಳಲ್ಲಿ ಬಂದಿದ್ದಾಗ ಇದರ ಬಗ್ಗೆ ಪ್ರಸ್ತಾನೆಯನ್ನು ಕೊಟ್ಟಿದ್ದೇವೆ. ಇಲ್ಲಿಗೆ 115ಲಕ್ಷ ರೂಪಾಯಿಗಳ ಡಬ್ಬಲ್ ರೋಡ್‌ನ ಅಗತ್ಯವಿದೆ ಎಂದು ಮಾನ್ಯ